ಕಾರ್ಮಿಕರಿಗೂ ಪೆನ್‌ಷನ್ ಕೊಡುವ ಬಗ್ಗೆ ಕೇರಳದಲ್ಲಿ ಇಂಥ ಒಂದು ಕಾನೂನು ಇದೆ ಎಂದು ತಿಳಿದು ಕೊಂಡಿದ್ದೇನೆ. ಸರ್ಕಾರ ಇದರ ಬಗ್ಗೆ ಯೋಚನೆ ಮಾಡಿ ಸೂಕ್ತವಾದ ಕ್ರಮ ತೆಗೆದುಕೊಳ್ಳಬೇಕಾಗುತ್ತದೆ. ಆದರೆ ಈಗಿರತಕ್ಕಂಥ ಕಾನೂನು ಪ್ರಾಪ್ತಿಯಲ್ಲಿ ೬೫ ವರ್ಷ ವಯಸ್ಸಾದವರೆಲ್ಲರಿಗೂ ಪೆನ್‌ಷನ್ ಕೊಡತಕ್ಕಂಥ ವ್ಯವಸ್ಥೆ ಇದೆ ಎಂದು ಹೇಳುತ್ತೇನೆ.

ಶ್ರೀ ಬಿ. ಎಂ. ಇದಿನಬ್ಬ.—ಕೃಷಿ ರೈತರಿಗೂ ಪೆನ್‌ಷನ್ ಕೊಡುವ ಬಗ್ಗೆ ಹೇಳುತ್ತಿದ್ದೇನೆ.

ಶ್ರೀ ಎ. ಲಕ್ಷ್ಮೀಸಾಗರ್.—ಎಲ್ಲರಿಗೂ ಅಂದರೆ ಯಾರಿಗೆ ಬೇಕಾದರೂ ಕೊಡುವುದಕ್ಕೆ ಅವಕಾಶ ಇದೆ. ಆದರೆ ಮಾನ್ಯ ಇದಿನಬ್ಬನವರು ಕೇಳತಕ್ಕಂಥ ಪ್ರಶ್ನೆಗೆ ಪ್ರತ್ಯೇಕವಾದ ವ್ಯವಸ್ಥೆ. ಮೂಡ ಬೇಕೆಂದು ಕೇಳಿದ್ದಾರೆ. ಕೇರಳ ಮಾದರಿಯಲ್ಲಿ ಮಾಡಬೇಕೆಂದು ಹೇಳಿದರೆ ಅದು ಒಂದು ಪಾಲಿಸಿಗೆ ಸಂಬಂಧಪಟ್ಟ ವಿಚಾರವಾಗಿರುವುದರಿಂದ ಅದನ್ನು ವಿಚಾರ ಮಾಡುತ್ತೇನೆಂದು ಹೇಳುತ್ತೇನೆ. ಕಾನೂನು ವ್ಯಾಪ್ತಿಯಲ್ಲಿ ೬೫ ವರ್ಷಕ್ಕೆ ಮೇಲ್ಪಟ್ಟವರೆಲ್ಲರಿಗೂ ಪೆನ್‌ಷನ್ ಕೊಡುವುದಕ್ಕೆ ಅವಕಾಶವಿದೆ.

XI ಹುಕ್ಕೇರಿ ತಾಲ್ಲೂಕಿನಲ್ಲಿ ಕೆರೆಗಳನ್ನು ಕಟ್ಟಿಸುವ ಬಗ್ಗೆ

ಶ್ರೀ ಮಲ್ಲಾರಿಗೌಡ. ಎಸ್. ಪಾಟೀಲ್.— ಮಾನ್ಯ ಅಧ್ಯಕ್ಷರೇ, ಹುಕ್ಕೇರಿ ತಾಲ್ಲೂಕಿನ ಕೆಳಕಂಡ ಕೆರೆಗಳ ನಿರ್ಮಾಣಕ್ಕೆ ಕಳೆದವರ್ಷ ಸದನದಲ್ಲಿ ಬಿಡುಗಡೆ ಮಾಡಿದ ಟೋಕನ್ ಗ್ರಾಂಟ್ ಕಕ್ಷೆಯಲ್ಲಿ ಬಂದಿದ್ದರೂ ಈ ವರ್ಷ ಸಾಕಷ್ಟು ಬರಗಾಲದಿಂದ ಜನರು ತೊಂದರೆ ಅನುಭವಿಸುತ್ತಿದ್ದು ನನ್ನ ಮತದಾರ ಕ್ಷೇತ್ರದ (೧) ಅಂಕಲೆ (೨) ಬಾಡವಾಡಿ (೩) ಮಸರಗುಪ್ಪಿ (೪) ರಾಸಿಂಗ್ ಹಾಗೂ (೫) ಮೊಚರಿ ಯಾತ ನೀರಾವರಿ ಕೆಲಸಕ್ಕಾಗಿ ಪ್ರತಿ ಕೆಲಸಕ್ಕೆ ಬೇಕಾಗುವ ಹಣವನ್ನು ಬಿಡುಗಡೆಮಾಡಿ ಗಡಿ ಭಾಗದ ಈ ಕೆಲಸಕ್ಕೆ ಆದ್ಯತೆ ಕೊಡದಿದ್ದಲ್ಲಿ ಜನ ಬೇರೆ ಕಡೆಗೆ ವಲಸೆ ಹೋಗುವ ಸಂಭವಿದ್ದು ಲೋಕೋಪಯೋಗಿ ಮಂತ್ರಿಗಳು ಈ ಕೆಲಸಕ್ಕಾಗಿ ಹಣವನ್ನು ತೀವ್ರವಾಗಿ ಬಿಡುಗಡೆ ಮಾಡಿ ಕೆಲಸವನ್ನು ಪ್ರಾರಂಭಿಸ ಬೇಕೆಂದು ಸರಕಾರದವರನ್ನು ಒತ್ತಾಯಿಸುತ್ತೇನೆ.

ಶ್ರೀ ಎಸ್. ಆರ್. ಬೊಮ್ಮಾಯಿ (ಕಂದಾಯ ಮಂತ್ರಿಗಳು).— ಮಾನ್ಯ ಸದಸ್ಯರು ಬರಗಾಲ ಪ್ರದೇಶಗಳಲ್ಲಿ ಬರಗಾಲ ಕಾರ್ಯಕ್ರಮಗಳನ್ನು ತೆಗೆದುಕೊಳ್ಳಲು ಸೂಕ್ತ ಕ್ರಮ ತೆಗೆದುಕೊಳ್ಳಬೇಕೆನ್ನುವ ವಿಚಾರವನ್ನು ಹೇಳಿದ್ದಾರೆ. ಮಾನ್ಯ ಲೋಕೋಪಯೋಗಿ ಮಂತ್ರಿಗಳ ಗಮನಕ್ಕೆ ಈ ವಿಚಾರವನ್ನು ತಂದು ಆದಷ್ಟು ಬೇಗ ಮಾಡಲಿಕ್ಕೆ ಹೇಳುತ್ತೇನೆ.

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್.—ಬರಗಾಲ ಪೀಡಿತ ಪ್ರದೇಶಗಳಿಂದು ಮಾನ್ಯ ಸಚಿವರ ಗಮನಕ್ಕೆ ಈಗಾಗಲೇ ಬಂದಿದೆ. ಆದ್ದರಿಂದ ಆಲ್ಲಿ ಕಾಮಗಾರಿ ಕೆಲಸಗಳನ್ನು ತೆಗೆದುಕೊಳ್ಳಲು ಹಣ ವನ್ನು ಬಿಡುಗಡೆ ಮಾಡಿದರೆ ಒಳ್ಳೆಯದೆಂದು ಹೇಳುತ್ತೇನೆ.

ಶ್ರೀ ಎಸ್. ಆರ್. ಬೊಮ್ಮಾಯಿ.—ಲೋಕೋಪಯೋಗಿ ಸಚಿವರಿಗೆ ತಿಳಿಸುತ್ತೇನೆ.

ಉಪಾಧ್ಯಕ್ಷರು.—ಈಗ ೩೫ಕ್ಕೆ ನಿಯಮದಮೇರೆಗೆ ಚರ್ಚೆ ಮುಗಿದಿರುತ್ತದೆ. ಮುಂದೆ ವಿಶ್ವೇಯ ಕಾರ್ಯಕಲಾಪಗಳನ್ನು ತೆಗೆದುಕೊಳ್ಳಲಾಗುತ್ತದೆ.

ಶ್ರೀ ಪಟವಂಕಿ ರತ್ನಾಕರ್.—ಯಾವ ಆಧಾರದಮೇಲೆ ನಿಯಮ ೩೫ಕ್ಕೆ ಹತ್ತು ಪ್ರಶ್ನೆ ಗಳನ್ನು ಸೆಲೆಕ್ಟ್ ಮಾಡುತ್ತೀರಿ?

ಉಪಾಧ್ಯಕ್ಷರು.—ಹತ್ತೇ ಬಂದರೆ ಎಲ್ಲವೂ ಬರುತ್ತದೆ. ಆದರೆ ಹತ್ತಕ್ಕಿಂತ ಜಾಸ್ತಿ ಇದ್ದರೆ ಬ್ಯಾಲೆಟ್ ಪದ್ಧತಿ ಅನುಸರಿಸುತ್ತೇವೆ. ಇಲ್ಲಿ ಅದೃಷ್ಟ ಕೂಡ ಬೇಕಾಗುತ್ತದೆ. ಇಂಥಾದ್ದೇ ಬರುತ್ತದೆ ಎಂದು ಹೇಳುವುದಕ್ಕೆ ಆಗುವುದಿಲ್ಲ. ಮೊದಲು ಕೊಟ್ಟಿದ್ದು ಕೂಡ ಬಾರದೇ ಇರಬಹುದು.

ಶ್ರೀ ಎಸ್. ಬಂಗಾರಪ್ಪ.—ನಾನು ಕೂಡ ಕಳಿಸಿಕೊಟ್ಟಿದ್ದೆ. ಆದು ಕೂಡ ಬರಲಿಲ್ಲ. ಎಲ್ಲಿ ಹೋಯಿತು ಆದು? ಇಲ್ಲಿ ಕೆಲವು ಮಾತ್ರ ಬಂದು ಉಳಿದದ್ದು ಏಕೆ ಬರುವುದಿಲ್ಲ ಎನ್ನುವ ವಿಚಾರ. ಆದರ ಜೊತೆಗೆ ಸದನ ಪ್ರಾರಂಭವಾದಾಗಿನಿಂದ ಪದೇಪದೇ ಹೇಳಲಿಕ್ಕೆ ನಮಗೆ ಆಸಕ್ತಿ ಇಲ್ಲ. ತುಂಬಾ ಪೆಂಡಿಂಗ್ ಹಾಗೆಯೇ ಉಳಿದಿದೆ. ನಾವು ಕೇಳುತ್ತಲೇ ಇದ್ದೇವೆ, ಪರಿಶೀಲನೆ ಮಾಡಿ ಉತ್ತರ ಕೊಡುತ್ತೇವೆ ಎಂದು ಹೇಳುತ್ತಲೇ ಇದ್ದಾರೆ. ಮುಂದಿನ ತಿಂಗಳು ಹತ್ತನೇ ತಾರೀಕಿಗೆ ಅಧಿವೇಶನ ಮುಕ್ತಾಯ ಆಗಬಹುದು. ಇಲ್ಲಿಯವರೆಗೆ ಪ್ರಸ್ತಾಪ ಮಾಡಿರತಕ್ಕಂಥ ವಿಷಯಗಳು

ನೂರಾರು ಆಗಿನೆ. ಹಿಂದೆ ಕೇಳಿದ್ದಕ್ಕೆ ಸರ್ಕಾರದ ಪರವಾಗಿ ಹೇಳಿಕೆ ಬರಬೇಕಿತ್ತು. ಆದರೆ ಇಲ್ಲಿಯವರೆಗೂ ಒಂದು ಹೇಳಿಕೆ ಕೂಡ ಇಲ್ಲ ನಿಜಹೇಳಬೇಕೆಂದರೆ, ಎರಡು ಮೂರು ದಿನಗಳಹಿಂದೆ ಪ್ರಸ್ತಾಪ ಮಾಡಿದ್ದಕ್ಕೂ ಸರ್ಕಾರದವರು ಉತ್ತರ ಕೊಡದೇ ಇದ್ದರೆ ನಾವು ಇಲ್ಲಿ ಏಕೆ ಪ್ರಸ್ತಾಪ ಮಾಡಬೇಕು ? ಸರ್ಕಾರ ಉತ್ತರ ಕೊಡುತ್ತೇವೆ ಎಂದು ಹೇಳಿದ ಮೇಲೆ ಅದಕ್ಕೆ ಬದ್ಧವಾಗಿ ಇರಬೇಕಾಗುತ್ತದೆ. ಆದರೆ ಈಗ ಉತ್ತರ ಕೊಡತಕ್ಕಂಥ ವಿಚಾರ ಇಲ್ಲವೇ ಇಲ್ಲ. ನಾವು ಇಲ್ಲಿ ಬರೀ ಪ್ರಸ್ತಾಪ ಮಾಡಿ ಪ್ರಾಕ್ಟೀಸ್ ಮಾಡಲಿಕ್ಕೆ ಬಂದಿಲ್ಲ. ಇಂಥಾ ದಿವಸ, ಇಷ್ಟು ತಾರೀಕಿಗೆ ಉತ್ತರ ಕೊಡುತ್ತೇವೆ ಎಂದು ಹೇಳಿದರೆ, ಪೆಂಡಿಂಗ್ ಇರುವುದನ್ನೆಲ್ಲಾ ಕ್ಲಿಯರ್ ಮಾಡಬಹುದು ಸಂಬಂಧಪಟ್ಟ ಮಂತ್ರಿಗಳು ಇಲ್ಲದೇ ಇದ್ದರೆ ಉತ್ತರ ಕೊಡುವುದಾದರೂ ಏನು? ಈಗ ಜಾಲಪ್ಪನವರು ಇಲ್ಲೇ ಇದ್ದರು ಕೇಳಿದ್ದಕ್ಕೆ ತಕ್ಷಣ ಉತ್ತರ ಕೊಟ್ಟರು. ಈ ವಿಷಯ ಅಲ್ಲಿಗೇ ಮುಗಿಯಿತು ನಿಯಮ ೩೫ಳಿರಲ್ಲಿ ಸದಸ್ಯರು ಕೇಳಬೇಕಾದರೆ ಒಂದು ಕಾರಣ ಇದೆ, ಒಂದು ಸಮಸ್ಯೆಗೆ ಕಾರಣ ಕೊಡುಹಿಡಿದು ಪರಿಹಾರ ಒದಗಿಸಬೇಕೆಂದು ರಾಜ್ಯದ ಜನತೆಯ ದೃಷ್ಟಿಯಿಂದ ಕೇಳುತ್ತಿದ್ದೇವೆಯೇ ಹೊರತು ಸುಮ್ಮನೆ ಪ್ರಸಾಪ ಮಾಡಿ ಗಿಳಿಪಾಠ ಒಪ್ಪಿಸುವುದಕ್ಕೆ ನಾವು ಇಲ್ಲಿ ಬಂದಿಲ್ಲ. ದಯವಾಡಿ ಇದರ ಬಗ್ಗೆ ತಿಳಿಸಬೇಕು ಹಿಂದೆ ಪ್ರಸ್ತಾಪ ಮಾಡಿದ್ದನ್ನು ಹತ್ತು-ಹದಿನೈದು ವಿಷಯಗಳಂತೆ ಒಂದು ದಿನಕ್ಕೆ ಉತ್ತರ ಕೊಡುತ್ತಾ ಹೋದರೆ ಮಾತ್ರ ಉಳಿದಿರುವುದನ್ನು ಮುಗಿಸಲು ಸಾಧ್ಯ ಇಲ್ಲದಿದ್ದರೆ ಸಾಧ್ಯವಿಲ್ಲ. ಇದ್ದಿದ್ದರೆ ಸೋಮವಾರದಿಂದನಿಯಮ ೩೫ಳಿ ಬಿಟ್ಟು ಬೇರೆ ಕಲಾಪಗಳನ್ನು ಪ್ರಾರಂಭ ಮಾಡಬೇಕಾಗುತ್ತದೆ. ನಮಗೆ ಬೇರೆ ದಾರಿಯೇ ಉಳಿದಿಲ್ಲ,

ಶ್ರೀ ಬಿ. ಸ್ವಾಮಿರಾವ್.--ನನ್ನ ಪ್ರಶ್ನೆ ನಿಯಮ ೩೫ಳಿರಲ್ಲಿ ಬರುವುದಕ್ಕೆ ತಾವೇ ಕಾರಣರಿದ್ದೀರಿ. ಚುಕ್ಕೆ ಗುರುತಿನ ಪ್ರಶ್ನೆ ತಿರಸ್ಕೃತವಾಯಿತು. ಲಿಖಿತ ಮೂಲಕವಾದರೂ ಬರಬೇಕಾಗಿತ್ತು. ಅದೂ ಬರಲಿಲ್ಲ. ನಿಯಮ ೩೫ಳಿರಲ್ಲಿ ಕೊನೆಗೆ ಕೊಟ್ಟಮೇಲೆ, ಅದು ಕೂಡ ಬರಲಿಲ್ಲವೆಂದು ಹೇಳಿದರೆ, ಇದರಲ್ಲೇನೋ ರಾಜಕೀಯ ಇದೆಯೆಂದು ಹೇಳಬೇಕಾಗುತ್ತದೆ. ತಾವು ನಮಗೆ ಅವಕಾಶ ಕೊಡಬೇಕು.

ಶ್ರೀ ಎಸ್. ಆರ್. ಬೊಮ್ಮಾಯಿ.--ಮಾನ್ಯ ವಿರೋಧ ಪಕ್ಷದ ನಾಯಕರು ನಿಯಮ ೩೫ಳಿರಲ್ಲಿ ಬಂದಂಥ ಪ್ರಶ್ನೆಗಳಿಗೆ ಸರ್ಕಾರ ಉತ್ತರ ಕೊಡಬೇಕೆಂದು ಹೇಳಿದ್ದಾರೆ. ಉತ್ತರ ಕೊಟ್ಟಿಲ್ಲವೆಂದು ಹೇಳುತ್ತಾರಲ್ಲ ಕೆಲವಕ್ಕೆ ನಾವು ಉತ್ತರ ಕೊಟ್ಟಿದ್ದೇವೆ. ಬಾಕಿ ಇರುವುದನ್ನು ಮುಂಗಿಸಬೇಕೆನ್ನುವುದನ್ನು ನಾನು ಒಪ್ಪುತ್ತೇನೆ. ನಾನು ಒಂದು ಸಲಹೆಯನ್ನು ಮಾಡುತ್ತಿದ್ದೇನೆ. ಅದೇನೆಂದರೆ. ನಿಯಮ ೩೫ಳಿರಲ್ಲಿ ಪ್ರಶ್ನೆ ಕೇಳುವುದನ್ನು ಸ್ವಲ್ಪ ಫಲಪ್ರದವಾಗಿ ಮಾಡಿ, ಉತ್ತರ ಕೊಡಬೇಕೆನ್ನುವ ದೃಷ್ಟಿಯಿಂದ, ಮೊನ್ನೆದಿವಸ ಬಂದಿದ್ದನ್ನು ಒಂದು ದಿವಸಕ್ಕೆ ಮೊದಲೇ ಸಂಬಂಧಪಟ್ಟ ಮಂತ್ರಿಗಳಿಗೆ ಕೊಟ್ಟು ತಿಳಿಸಿದರೆ ಒಳ್ಳೆಯದು. ಮೂರನೆ ದಿವಸ ಸಂಬಂಧಪಟ್ಟ ಮಂತ್ರಿಗಳು ಇರುವುದಕ್ಕೆ ಅವಕಾಶವಾಗುತ್ತದೆ. ಆದ್ದರಿಂದ ನನ್ನ ಸಲಹೆ ಏನೆಂದರೆ, ಒಂದು ದಿನ ಮೊದಲೇ ಕೊಟ್ಟಿದ್ದನ್ನು ಮರುದಿವಸ ತೆಗೆದುಕೊಳ್ಳಬೇಕು, ಬೆಳಿ ತಾಸು ಗ್ಯಾಪ್ ಇದ್ದರೆ ಒಳ್ಳೆಯದು. ಮಂತ್ರಿಗಳು ಹಾಜರಾಗಲಿಕ್ಕೆ ಸಾಧ್ಯವಾಗುತ್ತದೆ

ಶ್ರೀ ಎಸ್. ಬಂಗಾರಪ್ಪ --ನಾನು ಹೇಳಿದ್ದು ಹತ್ತು-ಹದಿನೈದು ದಿವಸಗಳಾದರೂ ಉತ್ತರ ಬರುವುದಿಲ್ಲವೆಂದು.

ಶ್ರೀ ಎಸ್. ಆರ್. ಬೊಮ್ಮಾಯಿ.--ನನ್ನ ಸಲಹೆಯನ್ನು ಒಪ್ಪಿಕೊಂಡರೆ. ೨ಳಿ ತಾಸುಗಳ ಮೊದಲೇ ಮಂತ್ರಿಗಳಿಗೆ ನೋಟೀಸ್ ಹೋಗಿರುತ್ತದೆ. ಆವಾಗ ಮರುದಿವಸ ಅವರು ಇಲ್ಲಿ ಇರಲೇಬೇಕಾಗುತ್ತದೆ ಮತ್ತು ಉತ್ತರ ಕೊಡಲಿಕ್ಕೆ ಸಾಧ್ಯವಾಗುತ್ತದೆ. ಆಗ ಎಲ್ಲದಕ್ಕೂ ಅವತ್ತೇ ಉತ್ತರ ಕೊಡಲಿಕ್ಕೆ ಸಾಧ್ಯವಾಗಬಹುದು. ಇನ್ನೊಂದು ವಿಚಾರ, ಮಾನ್ಯ ಸ್ವಾಮಿರಾವ್ ಅವರು ತಮ್ಮ ಪ್ರಶ್ನೆಯನ್ನು ಸ್ಟಾರ್ಡ್ ಕೊಶ್ಚನ್ ಆಗಿ ತೆಗೆದುಕೊಳ್ಳಬೇಕಿತ್ತು ಎಂದು ಹೇಳಿದರು. ಸರ್ಕಾರಕ್ಕೂ ಇದಕ್ಕೂ ಯಾವ ಸಂಬಂಧವೂ ಇಲ್ಲ. ಇಲ್ಲಿ ಮಾನ್ಯ ಸಭಾಧ್ಯಕ್ಷರು. ಇಲಾಖೆಯವರು ಒಂದು ನಿಯಮದ ಪ್ರಕಾರ ಪ್ರಶ್ನೆಗಳನ್ನು ಆಯ್ಕೆ ಮಾಡುತ್ತಾರೆ. ಇಲ್ಲಿ ಸರ್ಕಾರದ ಪ್ರಶ್ನೆ ಬರುವುದಿಲ್ಲ. ಅವರು ಯಾವಾಗ ಪಟ್ಟಿ ಮಾಡುತ್ತಾರೆ, ಆದಕ್ಕೆ ಉತ್ತರ ಕೊಡುವುದು ನಮ್ಮ ಕರ್ತವ್ಯ. ಸ್ಟಾರ್ಡ್ ಕೊಶ್ಚನ್ ರಿಜೆಕ್ಟ್ ಆಗಿದ್ದರೆ ನಿಯಮಕ್ಕೆ ಅನುಗುಣವಾಗಿಯೇ ರಿಜೆಕ್ಟ್ ಮಾಡಿರುತ್ತಾರೆ.

ಶ್ರೀ ಎಸ್. ಬಂಗಾರಪ್ಪ.—ಮುಂದೆ ಏನು ಮಾಡಬೇಕಂತ ಇದ್ದೀರಿ? ಪ್ರಸ್ತಾಪ ಆಗಿರುವುದಕ್ಕೆ ಉತ್ತರ ಯಾವಾಗ ಕೊಡುತ್ತೀರಿ?

ಶ್ರೀ ಎಸ್. ಆರ್. ಬೊಮ್ಮಾಯಿ.—ಸದನ ಮುಗಿಯುವುದರೊಳಗೆ ಕ್ಲಿಯರ್ ಮಾಡೋಣ.

ಶ್ರೀ ಎಸ್. ಬಂಗಾರಪ್ಪ.—ಉತ್ತರಕೊಡುತ್ತೇವೆ ಎಂದು ನೀವು ಹೇಳಿದ್ದೀರಿ.

ಶ್ರೀ ಎಸ್. ಆರ್. ಬೊಮ್ಮಾಯಿ.—ಯಾವ್ಯಾವುದು ಬಾಕಿ ಉಳಿದಿದೆ, ಅವುಗಳಿಗೆ ಉತ್ತರ ಕೊಡುವುದಕ್ಕೆ ಪ್ರಯತ್ನ ಮಾಡುತ್ತೇವೆ.

ಶ್ರೀ ಎಸ್. ಬಂಗಾರಪ್ಪ.—ಅಂದರೆ, ಸೋಮವಾರದಿಂದ ದಿನಕ್ಕೆ ೧೦–೧೫ರಂತೆ ತೆಗೆದುಕೊಳ್ಳಬೇಕಾಗುತ್ತದೆ.

ಉಪಾಧ್ಯಕ್ಷರು.—ದಿನಕ್ಕೆ ಹತ್ತು ಪ್ರಶ್ನೆಗಳಿಗೆ ಉತ್ತರ ಕೊಡುವುದಕ್ಕೆ ಸಾಧ್ಯವಾದೀತು ಹತ್ತಕ್ಕಿಂತ ಜಾಸ್ತಿ ಇದ್ದರೆ, ಉತ್ತರ ನಿರೀಕ್ಷಣೆ ಮಾಡುವುದು ಕಷ್ಟವಾಗಬಹುದು.

ಶ್ರೀ ಎಸ್. ಬಂಗಾರಪ್ಪ.—ತಾವು ದಯವಮಾಡಿ ಈಗ ಏನು ಒಂದು ಪಟ್ಟಿಯನ್ನು ತಯಾರು ಮಾಡಿದ್ದಾರೆ. ಅದನ್ನು ನಮಗೂ ಮತ್ತು ಮಾನ್ಯ ಮಂತ್ರಿಗಳಿಗೂ ಕಳುಹಿಸಿಕೊಟ್ಟರೆ ಒಳ್ಳೆಯದಾಗುತ್ತದೆ.

ಉಪಾಧ್ಯಕ್ಷರು.—ಆಗಬಹುದು.

ಶ್ರೀ ಜಿ. ಎಸ್. ಶಿವನಂಜಪ್ಪ.—ನಾವು ಕಳುಹಿಸಿ ಕೊಡುವ ಪ್ರಶ್ನೆಗಳನ್ನು ಚುಕ್ಕೆ ಗುರುತು ಇಲ್ಲದ ಪ್ರಶ್ನೆಗಳನ್ನಾಗಿ ಪರಿವರ್ತನೆ ಮಾಡುವುದಕ್ಕೆ ಮೊದಲು ನಮಗೆ ತಾವು ತಿಳಿಸಬೇಕು. ಇಲ್ಲದಿದ್ದರೆ ನಮಗೆ ಬಹಳ ಕಷ್ಟವಾಗುತ್ತದೆ.

ಉಪಾಧ್ಯಕ್ಷರು.—ತಾವು ನೋಟೀಸ್ ಕೊಡಿ. ನಾವು ವಿಚಾರ ಮಾಡುತ್ತೇವೆ.

ಶ್ರೀ ಪಟಮಕ್ಕಿ ರತ್ನಾಕರ್.—ನಿಯಮ ೩೫೫ರ ಕೆಳಗೆ ನಾವು ಕೊಡುವ ನೋಟೀಸ್‌ಗಳನ್ನು ದಿನಕ್ಕೆ ಕೇವಲ ಪತ್ತಕ್ಕೆ ಸೀಮಿತಗೊಳಿಸುವುದು ಸರಿಯಲ್ಲ.

ಉಪಾಧ್ಯಕ್ಷರು.—ಬಿಸಿನೆಸ್ ಅಡ್ವೈಜರಿ ಕಮಿಟಿಯಲ್ಲಿ ಈ ಬಗ್ಗೆ ತೀರ್ಮಾನವಾಗಿದೆ.

ಮಂತ್ರಿಯವರ ಹೇಳಿಕೆ

ಕೋಲಾರ ಜಿಲ್ಲೆಯಲ್ಲಿ ಬೈವೋಲ್ಟೈನ್ ಜಾತಿ ರೇಷ್ಮೆ ಮೊಟ್ಟೆ ವಿತರಣೆ ಬಗ್ಗೆ.

ಶ್ರೀ ವೈ. ಕೆ. ರಾಮಯ್ಯ (ರೇಷ್ಮೆ, ಕೃಷಿ ರಾಜ್ಯ ಸಚಿವರು).—ಮಾನ್ಯ ಅಧ್ಯಕ್ಷರೇ, ೫೫ನೇ ನಿಯಮದ ಪ್ರಕಾರ ಈ ಸದನದಲ್ಲಿ ಪ್ರಸ್ತಾಪ ಮಾಡುವಂತಹ ವಿಷಯಗಳಿಗೆ ಸರ್ಕಾರದಿಂದ ಉತ್ತರ ಸಿಗುತ್ತಿಲ್ಲವೆಂದು ವಿರೋಧ ಪಕ್ಷದ ನಾಯಕರು ಈಗ ತಾನೇ ಹೇಳಿದ್ದಾರೆ. ಆದರೆ ಯಾರು ಯಾರು ವಿಷಯಗಳನ್ನು ಪ್ರಸಾಪ ಮಾಡುತ್ತಾರೆಂಬುದು ನಮಗೆ ಮೊದಲೇ ತಿಳಿಯುವುದಿಲ್ಲ. ಈ ಕಾರಣದಿಂದ ನಾವು ಸಭೆಯಲ್ಲಿದ್ದರೂ ಸಹ ಕೂಡಲೇ ಉತ್ತರ ಕೊಡುವುದು ನಮಗೆ ಕಷ್ಟವಾಗುತ್ತದೆ. ಆಕ್ಷನ್ ಎತ್ತುವುದರ ಮೂಲಕ ಯಾರ ಯಾರ ನೋಟೀಸ್‌ಗಳನ್ನು ಅಂಗೀಕಾರ ಮಾಡುತ್ತೀರೋ ಅದನ್ನು ಸಂಬಂಧಪಟ್ಟ ಮಂತ್ರಿಗಳಿಗೆ ತಾವು ಒಂದು ದಿನ ಮುಂಚಿತವಾಗಿ ತಿಳಿಸಿದರೆ ನಾವು ಆ ಸಮಯಕ್ಕೆ ಎಷ್ಟು ಉತ್ತರ ಕೊಡಲು ಸಾಧ್ಯವಾಗುತ್ತದೋ ಅಷ್ಟನ್ನು ಕೊಡುತ್ತೇವೆ. ಈಗ ಆ ವಿಷಯಗಳು ಮೊದಲೇ ನಮ್ಮ ಗಮನಕ್ಕೆ ಬಾರದ ಕಾರಣದಿಂದ ಕೂಡಲೇ ಉತ್ತರ ಕೊಡಲು ಕಷ್ಟವಾಗುತ್ತಿದೆ. ನೆನ್ನೆ ದಿವಸ ಮಾನ್ಯ ವೆಂಕಟರಾವಮ್ಮನವರು ನಿಯಮ ೩೫೫ರ ಕೆಳಗೆ ಏನು ಒಂದು ವಿಷಯವನ್ನು ಇಲ್ಲಿ ಪ್ರಸ್ತಾಪ ಮಾಡಿದ್ದರು. ಅದಕ್ಕೆ ನಾನು ಈ ಕೆಳಕಂಡ ಹೇಳಿಕೆಯನ್ನು ಕೊಡಬಯಸುತ್ತೇನೆ.

ಕೋಲಾರ ಜಿಲ್ಲೆಯ ಹಾಗೂ ಕರ್ನಾಟಕದ ಇತರ ಕಡೆಗಳ ರೇಷ್ಮೆ ಬೆಳೆಗಾರರಿಗೆ ಬೈವೋಲ್ಟೈನ್ ಜಾತಿಯ ಮೊಟ್ಟೆಯನ್ನು ಕಡ್ಡಾಯದಿಂದ ಕೊಡಲಾಗುತ್ತಿಲ್ಲ. ಬೈವೋಲ್ಟೈನ್ ಜಾತಿಯ ಮೊಟ್ಟೆ